## ಅಧ್ಯಾಯ ೫
# ಕೈಗಾರಿಕೆಗಳು ಮತ್ತು ಆರ್ಥಿಕ ಪ್ರವೃತ್ತಿಗಳು

**ಪ್ರಾಚೀನ ಕೈಗಾರಿಕೆಗಳು :** ತಾಲೂಕಿನಲ್ಲಿ ಬಹು ಹಿಂದಿನಿಂದಲೂ ಅಸ್ತಿತ್ವದಲ್ಲಿದ್ದ ನೇಕಾರಿಕೆ, ಕುಂಬಾರಿಕೆ, ಕಮ್ಮಾರಿಕೆ, ಗಾಣ, ಉಪ್ಪು, ಸುಣ್ಣ, ಇಟ್ಟಿಗೆ ಉದ್ಯಮ ಮುಂತಾದ ಸಾಂಪ್ರದಾಯಿಕ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಶಾಸನಾಧಾರಗಳಿವೆ. ಅದರಲ್ಲೂ ಎಣ್ಣೆ ತಯಾರಿಕೆ, ನೇಕಾರಿಕೆಗಳಿಗೆ ಸಂಬಂಧಿಸಿದಂತೆ ತಾಲೂಕಿನ ಬೆಟ್ಟಹಳ್ಳಿ (೧೩೧೧) ಸೇರಿದಂತೆ ಅನೇಕ ಶಾಸನಗಳಲ್ಲಿ ಪ್ರಸ್ತಾಪವಿದೆ. ತಾಲೂಕಿನ ಕುರುಬೂರು ಹಾಗೂ ಕರೋಹಟ್ಟಿಯ ಶಾಸನಗಳಲ್ಲಿ ಉಪ್ಪಿನಮೋಳೆಯ ಉಲ್ಲೇಖವಿದ್ದು, ತಾಲೂಕಿನಲ್ಲಿ ಈಗಲೂ ಉಪ್ಪಾರರು, ಅಧಿಕ ಸಂಖ್ಯೆಯಲ್ಲಿರುವುದು ಇದನ್ನು ಪುಷ್ಟೀಕರಿಸುತ್ತದೆ.

ಕಾವೇರಿ–ಕಪಿಲ ನದಿಗಳಿಂದಾಗಿ ಹಿಂದಿನಿಂದಲೂ ಈ ತಾಲೂಕು ಕೃಷಿ ಪ್ರಧಾನವಾಗಿದ್ದರೂ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಜಾರಿಗೆ ತಂದಿರುವ ಪ್ರಗತಿಪರ ಕೈಗಾರಿಕಾ ನೀತಿಗಳಿಂದಾಗಿ ಕೈಗಾರಿಕಾ ರಂಗದಲ್ಲೂ ಪ್ರಗತಿ ಸಾಧಿಸಲು ಯತ್ನಿಸುತ್ತಿದೆ. ಗ್ರಾಮೀಣ ಪ್ರದೇಶದಲ್ಲೂ ಕೈಗಾರಿಕಾಭಿವೃದ್ಧಿಗಾಗಿ ಗ್ರಾಮೀಣ ಕೈಗಾರಿಕೀಕರಣ ಯೋಜನೆಯನ್ನು ೧೯೫೪–೫೫ರಲ್ಲಿ ಜಾರಿಗೊಳಿಸಲಾಯಿತು. ಕೃಷಿ ಆಧಾರಿತ ರೇಷ್ಮೆ ಉದ್ಯಮ, ಆಲೆಮನೆ, ತೋಟಗಾರಿಕೆ ವಾಣಿಜ್ಯಬೆಳೆ, ಅಕ್ಕಿಗಿರಣಿ, ಎಣ್ಣೆಗಿರಣಿ ಮುಂತಾದ ಕೈಗಾರಿಕೆಗಳಲ್ಲದೆ ಇಟ್ಟಿಗೆ, ಹೆಂಚು, ಬಿದಿರು ಉತ್ಪನ್ನ, ಬಡಗಿ, ಕಮ್ಮಾರಿಕೆ, ಕುಂಬಾರಿಕೆ, ನೇಕಾರಿಕೆ, ಸಾಮಿಲ್ಲು (ಮರಕೊಯ್ಯುವ ಕಾರ್ಖಾನೆ) ಮುಂತಾದ ಉದ್ಯಮಗಳೂ ತಾಲೂಕಿನಲ್ಲಿ ಕಂಡುಬರುತ್ತವೆ. ಆದರೆ ಖನಿಜ ಸಂಪನ್ಮೂಲದ ಕೊರತೆ ಹಾಗೂ ಸೀಮಿತ ಕೈಗಾರಿಕೆ ಚಟುವಟಿಕೆಗಳಿಂದಾಗಿ ನರಸೀಪುರ ತಾಲೂಕು ಸೇರಿದಂತೆ ಮೈಸೂರು ಜಿಲ್ಲೆಯನ್ನು ಕೈಗಾರಿಕಾ ದೃಷ್ಟಿಯಿಂದ ಹಿಂದುಳಿದ ಪ್ರದೇಶವೆಂದು ೧೯೭೧ರಲ್ಲಿ ಘೋಷಿಸುವ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ವಿಶೇಷ ರಿಯಾಯಿತಿ ಹಾಗೂ ಸವಲತ್ತುಗಳು ದೊರೆಯುವಂತಾಯಿತು. ಅಲ್ಲದೇ ರಾಜ್ಯದ ಅತೀ ಹಿಂದುಳಿದ ಮೂರು ಕೈಗಾರಿಕಾ ಜಿಲ್ಲೆಗಳಲ್ಲಿ ಮೈಸೂರು ಜಿಲ್ಲೆಯನ್ನೂ ಪರಿಗಣಿಸಿದ್ದುದರಿಂದ ಕೇಂದ್ರದ ಅನುದಾನದಲ್ಲಿ ಶೇ. ೧೫ ಸಬ್ಸಿಡಿಯೂ ಲಭಿಸುವಂತಾಯಿತು. ಅದರಂತೆ ತಾಲೂಕಿನಲ್ಲಿ ಆರಂಭವಾಗುವ ಕೈಗಾರಿಕೆಗಳಿಗೂ ಈ ಸಬ್ಸಿಡಿ ಲಭಿಸುವಂತಾಯಿತು.



ಅದರಲ್ಲೂ ದೇಶದಲ್ಲಿಯೇ ಮೊದಲ ಬಾರಿಗೆ ೧೯೮೨–೮೩ರಲ್ಲಿ ರಾಜ್ಯ ಮಟ್ಟದಲ್ಲಿ ಹೊಸ ಕೈಗಾರಿಕಾ ನೀತಿಯನ್ನು ಘೋಷಿಸುವ ಮೂಲಕ ರಾಜ್ಯ ಸರ್ಕಾರವು ಕಾರ್ಮಿಕ ಪ್ರಧಾನ ಹಾಗೂ ವಿದ್ಯುತ್ ಪ್ರಧಾನ ಕೈಗಾರಿಕೆಗಳ ಸ್ಥಾಪನೆಗೆ ವಿಶೇಷ ರಿಯಾಯಿತಿ ಸವಲತ್ತುಗಳನ್ನು ನೀಡಲು ಮುಂದಾಯಿತು. ಇದೇ ರೀತಿ ರಾಜ್ಯ ಸರ್ಕಾರದ ೧೯೮೮ ೧೯೯೦, ೧೯೯೩, ೧೯೯೬, ೧೯೯೮, ೨೦೦೧ ಹಾಗೂ ೨೦೦೬ ರ ಕೈಗಾರಿಕಾ ನೀತಿಗಳಲ್ಲೂ, ಅನೇಕ ಸವಲತ್ತು ಹಾಗೂ ವಿಶೇಷ ರಿಯಾಯಿತಿಗಳನ್ನು ಬೃಹತ್, ಮಧ್ಯಮ, ಸಣ್ಣ ಹಾಗೂ ಅತೀ ಸಣ್ಣ ಕೈಗಾರಿಕೆಗಳ ಸ್ಥಾಪನೆಗೆಂದು ಘೋಷಿಸಲಾಗಿದೆ. ಡಿ.ಎಂ. ನಂಜುಂಡಪ್ಪ ಸಮಿತಿಯ ವರದಿಯು ರಾಜ್ಯದ ವಿವಿಧ ತಾಲೂಕುಗಳನ್ನು ಮೂರು ವಲಯಗಳನ್ನಾಗಿ ವರ್ಗೀಕರಿಸಿದ್ದು, ಆ ಪ್ರಕಾರ ೨೦೦೬ರ ನೂತನ ಕೈಗಾರಿಕಾ ನೀತಿಯನ್ನು ರೂಪಿಸಲಾಗಿದೆ. ಅದರಂತೆ ಈ ತಾಲೂಕು ಕೈಗಾರಿಕಾವಲಯ–I ಗುಂಪಿಗೆ ಒಳಪಟ್ಟಿದ್ದು ಕೈಗಾರಿಕೆಗಳಲ್ಲಿ ಹೆಚ್ಚು ಹಿಂದುಳಿದ ತಾಲೂಕು ಎಂದು ಪರಿಗಣಿಸಲ್ಪಟ್ಟಿದೆ. ಸ್ಥಾವರ ಮತ್ತು ಯಂತ್ರೋಪಕರಣಗಳಲ್ಲಿ ರೂ. ೨೫ ಲಕ್ಷ ಗಳಿಗಿಂತ ಕಡಿಮೆ ಬಂಡವಾಳ ಹೂಡಿರುವಂತಹ ಕೈಗಾರಿಕೆಗಳು ಅತೀ ಸಣ್ಣ ಪ್ರಮಾಣದ ಕೈಗಾರಿಕೆಗಳಾಗಿದ್ದು, ಇವುಗಳಿಗೆ ಯಾವುದೇ ಪ್ರಾದೇಶಿಕ ನಿರ್ಬಂಧವಿರುವುದಿಲ್ಲ. ಸ್ವಂತವಾಗಿ ಅಥವಾ ಭೋಗ್ಯ ಇಲ್ಲವೇ ಹೈರ್ ಪರ್ಚೆಸ್ ಷರತ್ತಿನ ಮೇಲೆ ಹೊಂದಿರುವ ಸ್ಥಾವರ ಮತ್ತು ಯಂತ್ರೋಪಕರಣಗಳಲ್ಲಿ ರೂ.೧೦೦ ಲಕ್ಷಗಳಿಗಿಂತ ಕಡಿಮೆ ಬಂಡವಾಳ ಹೂಡಿರುವಂತಹ ಕೈಗಾರಿಕೆಗಳಿಗೆ ಸಣ್ಣ ಪ್ರಮಾಣದ ಕೈಗಾರಿಕೆಗಳೆಂತಲೂ, ಅತಿ ಸಣ್ಣ/ಸಣ್ಣ ಪ್ರಮಾಣದ ಕೈಗಾರಿಕೆಗಳೆಂದು ವರ್ಗೀಕರಿಸಲ್ಪಡದ ಎಲ್ಲಾ ಕೈಗಾರಿಕೆಗಳನ್ನು ಮಧ್ಯಮ/ಬೃಹತ್ ಕೈಗಾರಿಕೆಗಳೆಂತಲೂ, ಪರಿಗಣಿಸಲಾಗಿದೆ. ಶೇ.೧೦೦ರಷ್ಟು ರಫ್ತು ಆಧಾರಿತ ಉದ್ಯಮವೆಂದರೆ, (ಭಾರತ ಸರ್ಕಾರ ಕಾಲಕಾಲಕ್ಕೆ ಅನುಮತಿ ನೀಡುವಂತೆ) ಉತ್ಪಾದಿಸಿದ ಎಲ್ಲಾ ಉತ್ಪನ್ನಗಳನ್ನು ಅಥವಾ ಕೇಂದ್ರ ಸರ್ಕಾರ ಕಾಲಕಾಲಕ್ಕೆ ನೀಡುವ ಮಾರ್ಗಸೂಚಿಯಂತೆ ಅಥವಾ ಪರಿಭಾಷೆಗನುಗುಣವಾದ ಪ್ರಮಾಣದಲ್ಲಿ ರಫ್ತು ಮಾಡುವುದಾಗಿ ಒಪ್ಪಿಕೊಂಡಿರುವಂತಹ ಒಂದು ಉದ್ಯಮ. ಇಂತಹ ಉದ್ಯಮಗಳನ್ನು, ರಫ್ತು ಆಧಾರಿತ ಘಟಕ (ಇ.ಒ.ಯು) / ಎಕ್ಸ್‌ಪೋರ್ಟ್ ಪ್ರಮೋಷನ್ ಇಂಡಸ್ಟ್ರಿಯಲ್ ಪಾರ್ಕ್ / ಎಲೆಕ್ಟ್ರಾನಿಕ್ಸ್ ಹಾರ್ಡ್‌ವೇರ್ ಟೆಕ್ನಾಲಜಿ ಪಾರ್ಕ್ (ಇ.ಹೆಚ್.ಟಿ.ಪಿ) / ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಇಲ್ಲವೇ ವಿಶೇಷ ಆರ್ಥಿಕ ವಲಯ ಯೋಜನೆಗಳಡಿಯಲ್ಲಿ ಪ್ರಾರಂಭಿಸಬಹುದಾಗಿದೆ. ಬೃಹತ್ ಯೋಜನೆಯು ಸ್ಥಿರಾಸ್ತಿಯಲ್ಲಿ ರೂ. ೧೦೦ ಕೋಟಿಗಳಿಗಿಂತ ಹೆಚ್ಚಿನ ಬಂಡವಾಳ ಹೂಡುವುದಾಗಿದೆ. ಈ ಕೈಗಾರಿಕಾ ನೀತಿಯನ್ವಯ ಬಂಡವಾಳ ಹೂಡಿಕೆ ಸಹಾಯಧನದಲ್ಲಿ ತಾಲೂಕಿನಲ್ಲಿ ಸಣ್ಣ ಕೈಗಾರಿಕೆಯನ್ನು ಆರಂಭಿಸಲು, ಸ್ಥಿರಾಸ್ತಿ ಮೌಲ್ಯದ ಶೇ.೨೫ರಷ್ಟು ಸಹಾಯಧನವನ್ನು ಪಡೆಯಬಹುದಾಗಿದ್ದು, ಗರಿಷ್ಟ ಮಿತಿಯನ್ನು ಪ್ರತಿ ಘಟಕಕ್ಕೆ ೧೫ ಲಕ್ಷ ರೂ.ಗಳಿಗೆ ನಿಗದಿಪಡಿಸಲಾಗಿದೆ. ಇದರ ಜೊತೆಗೆ ಉದ್ದಿಮೆದಾರರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ ಅಂಗವಿಕಲ/ ಅಲ್ಪಸಂಖ್ಯಾತ/ಮಾಜಿಯೋಧರಾಗಿದ್ದಲ್ಲಿ ಸ್ಥಿರಾಸ್ತಿ ಮೌಲ್ಯದ ಶೇ. ೫ ರಷ್ಟು ಹೆಚ್ಚು ಸಹಾಯಧನ ಪಡೆಯಬಹುದಾಗಿದ್ದು, ಗರಿಷ್ಟ

ಮಿತಿಯನ್ನು ಒಂದು ಲಕ್ಷ ರೂ.ಗಳಿಗೆ ನಿಗದಿಪಡಿಸಲಾಗಿದೆ. ಮಹಿಳಾ ಉದ್ಯಮಿಯಾದಲ್ಲಿ ಗರಿಷ್ಟ ಮಿತಿಯನ್ನು ಐದು ಲಕ್ಷ ರೂ.ಗಳಿಗೆ ನಿಗದಿಪಡಿಸಲಾಗಿದೆ. ಈ ಉತ್ತೇಜನವು ಕೆ.ಎಸ್.ಎಫ್.ಸಿ/ಕೆ.ಎಸ್.ಐ.ಐ.ಡಿ.ಸಿ/ಬ್ಯಾಂಕುಗಳು/ಇತರ ಹಣಕಾಸು ಸಂಸ್ಥೆಗಳು ನೆರವು ನೀಡಿದ ಘಟಕಗಳಿಗೆ ಮಾತ್ರ ಲಭ್ಯವಿದೆ. ಎಲ್ಲಾ ವರ್ಗದ ಕೈಗಾರಿಕೆಗಳಿಗೂ ಪೂರ್ಣ ಪರಿವರ್ತನಾ ಶುಲ್ಕ ವಿನಾಯಿತಿ ನೀಡಲಾಗಿದೆ. ಭೂಮಿಯ ಪ್ರಮಾಣವು ೧೦೦ ಕೋಟಿ ಸ್ಥಿರ ಬಂಡವಾಳದ ಮೆಗಾ ಕೈಗಾರಿಕೆಯಾದಲ್ಲಿ ಗರಿಷ್ಟ ೫೦ ಎಕರೆ; ಬೃಹತ್/ಮಧ್ಯಮ ಕೈಗಾರಿಕೆಯಾದಲ್ಲಿ ಗರಿಷ್ಟ ೨೫ ಎಕರೆ, ಸಣ್ಣ ಕೈಗಾರಿಕೆಯಾದಲ್ಲಿ ಗರಿಷ್ಟ ೧೦ ಎಕರೆ ಎಂದು ನಿಗದಿಪಡಿಸಲಾಗಿದೆ. ಕೆ.ಐ.ಎ.ಡಿ.ಬಿ. ಮೂಲಕ ಭೂಮಿಯ ಸ್ವಾಧೀನ ಮತ್ತು ವಿತರಣೆ ಸಂದರ್ಭದಲ್ಲಿ ವಲಯ–I ಮತ್ತು ವಲಯ–II ರ ಪ್ರದೇಶಗಳಿಗೆ ಸ್ವಾಧೀನ ಶುಲ್ಕವು ಶೇ. ೧೦ರಷ್ಟು ಇರುವುದು. ತ್ಯಾಜ್ಯವಸ್ತುಗಳ ಸಂಸ್ಕರಣಾ ಸ್ಥಾವರಗಳ (ಇ.ಟಿ.ಪಿ) ಸ್ಥಾಪನೆಗೆಂದು ಎಲ್ಲಾ ವಲಯಗಳಲ್ಲಿನ ಎಲ್ಲಾ ವರ್ಗದ ಕೈಗಾರಿಕೆಗಳಿಗೆ ಇ.ಟಿ.ಪಿ. ವೆಚ್ಚದ ಶೇ.೫೦ರಷ್ಟನ್ನು ಬಂಡವಾಳ ಸಹಾಯಧನವಾಗಿ ಒಮ್ಮೆಲೆ ನೀಡಬಹುದಾಗಿದೆ. ಗರಿಷ್ಟ ಮಿತಿಯನ್ನು ಪ್ರತಿ ಘಟಕಕ್ಕೆ ೧೦೦ ಲಕ್ಷ ರೂ.ಗೆ ನಿಗದಿಸಿದೆ. ಪ್ರವೇಶ ತೆರಿಗೆ ಹಾಗೂ ವಿಶೇಷ ಪ್ರವೇಶ ತೆರಿಗೆಗಳನ್ನು ವಲಯ–I ಮತ್ತು ವಲಯ–II ಕೈಗಾರಿಕೆಗಳಿಗೆ ಯೋಜನೆಯ ಅನುಷ್ಟಾನ ಆರಂಭವಾದ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಪ್ಲಾಂಟ್ ಮತ್ತು ಮೆಷಿನರಿ ಹಾಗೂ ಕ್ಯಾಪಿಟಲ್ ಗೂಡ್ಸ್‌ಗೆ ಪ್ರವೇಶ ತೆರಿಗೆ ಮತ್ತು ವಿಶೇಷ ಪ್ರವೇಶ ತೆರಿಗೆಯಿಂದ ವಿನಾಯಿತಿ ನೀಡಲಾಗುತ್ತದೆ. ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಯೋಜನೆಗಳಿಗೆ ನಿರ್ದಿಷ್ಟ ಕ್ಷೇತ್ರದಲ್ಲಿ ತರಬೇತಿಗಾಗಿ ತರಬೇತಿ ಕೇಂದ್ರವನ್ನು ಸ್ಥಾಪಿಸಲು ಐದು ಎಕರೆವರೆಗೆ ಸರ್ಕಾರಿ ಜಮೀನನ್ನು ಉಚಿತವಾಗಿ ನೀಡಲು ಪರಿಗಣಿಸಬಹುದು. ಇದರ ಜೊತೆಗೆ ಯೋಜನಾ ವೆಚ್ಚದ ಶೇ. ೫೦ ರಷ್ಟನ್ನು ಪ್ರತೀ ಕೇಂದ್ರಕ್ಕೆ ಎರಡು ಕೋಟಿ ರೂ.ಗಳಿಗೆ ಸೀಮಿತಗೊಳಿಸಿ ಕ್ಯಾಪಿಟಲ್ ವಂತಿಗೆಯಾಗಿ ನೀಡಲಾಗುವುದು. ತರಬೇತಿ ಸಂಸ್ಥೆಗಳನ್ನು ನಡೆಸಲು ತಗಲುವ ಆವರ್ತನಾ ವೆಚ್ಚಕ್ಕಾಗಿ ಪ್ರತಿಯೊಬ್ಬ ಅಭ್ಯರ್ಥಿಗೆ ತಿಂಗಳಿಗೆ ರೂ. ೭೫೦–೦೦ ರಂತೆ ನೀಡಲಾಗುವುದು. ಗರಿಷ್ಟ ಮಿತಿ ವರ್ಷಕ್ಕೆ ೧೫ ಲಕ್ಷ ರೂ.ಗಳಾಗಿದ್ದು, ಮೂರು ವರ್ಷಗಳ ಅವಧಿಯಾಗಿರುತ್ತದೆ. ವಲಯ–I ಮತ್ತು ವಲಯ–IIರಲ್ಲಿ ಬರುವ ಸಣ್ಣ ಕೈಗಾರಿಕೆಗಳ ತಾಂತ್ರಿಕ ಉನ್ನತೀಕರಣಕ್ಕೆ ಪ್ರಸ್ತುತ ಜಾರಿಯಲ್ಲಿರುವ ಕೆ.ಎಸ್.ಎಫ್.ಸಿ./ಕೆ.ಎಸ್.ಐ.ಐ.ಡಿ.ಸಿ ಗಳಿಂದ ತಾಂತ್ರಿಕ ಉನ್ನತೀಕರಣ ಸಾಲವನ್ನು ಪಡೆದಾಗ ಲಭ್ಯವಿರುವ ಶೇ.ನಾಲ್ಕರಷ್ಟು ಬಡ್ಡಿ ಸಹಾಯಧನ ಯೋಜನೆಯನ್ನು ಭಾರತ ಸರ್ಕಾರದ ಸಿ.ಎಲ್.ಸಿ.ಎಸ್. ಯೋಜನೆಯಡಿ ಅನರ್ಹವಾದ ಸಂದರ್ಭದಲ್ಲಿ ಶೆಡ್ಯೂಲ್ಡ್ ಕಮರ್ಷಿಯಲ್ ಬ್ಯಾಂಕುಗಳು ನೀಡುವ ತಾಂತ್ರಿಕ ಉನ್ನತೀಕರಣ ಸಾಲಗಳಿಗೂ ವಿಸ್ತರಿಸಲಾಗುವುದು. ಪ್ರಸ್ತುತ ಜಾರಿಯಲ್ಲಿರುವ ಬಿ.ಐ.ಎಸ್. ಪ್ರಾಡಕ್ಟ್ ಸರ್ಟಿಫಿಕೇಷನ್ ಅಥವಾ ಐ.ಎಸ್.ಓ. ಸಿರೀಸ್ ಸರ್ಟಿಫಿಕೇಷನ್ ಪಡೆಯುವ ಸಣ್ಣ ಕೈಗಾರಿಕೆಗಳಿಗೆ ಲಭ್ಯವಿರುವ ಉತ್ತೇಜನವನ್ನು ಹೆಚ್ಚಿನ ಆರ್ಥಿಕ ಪೂರೈಕೆಯೊಂದಿಗೆ ಮುಂದುವರಿಸಲಾಗುವುದು.



ಪೇಟೆಂಟ್ ನೋಂದಣಿ ವೆಚ್ಚದ ಶೇ.೫೦ ರಷ್ಟು ಸಹಾಯಧನ ಅಥವಾ ಗರಿಷ್ಟ ಮಿತಿ ಪ್ರತಿ ಘಟಕಕ್ಕೆ ಎರಡು ಲಕ್ಷ ರೂ. ನೀಡಲಾಗುತ್ತದೆ. ಕೃಷಿ ಉತ್ಪನ್ನಗಳನ್ನು ಸಂಸ್ಕರಿಸುವ ಕೈಗಾರಿಕೆಗಳು ಕೃಷಿ ಉತ್ಪನ್ನಗಳನ್ನು ರೈತರಿಂದ ನೇರವಾಗಿ ಖರೀದಿಸುವ ಸಂದರ್ಭದಲ್ಲಿ ಎ.ಪಿ.ಎಂ.ಸಿ. ಸೆಸ್‌ನಿಂದ ವಿನಾಯಿತಿ ನೀಡಲಾಗುವುದು. ಈ ನೀತಿಯನ್ವಯ ಮದ್ಯ, ಭಟ್ಟಿ ತಯಾರಿಕೆ ಘಟಕ, ಕಾಕಂಬಿ–ಖಂಡಸಾರಿ ಘಟಕ, ಫೋಟೋ ಸ್ಟುಡಿಯೋ ಕಲರ್ ಪ್ರೊಸೆಸಿಂಗ್ ಘಟಕ, ರಾಸಾಯನಿಕ ಗೊಬ್ಬರಗಳ ಮಿಶ್ರಣ ಘಟಕ, ಫೋಟೋ ಕಾಪಿ, ಜೆರಾಕ್ಸ್ ಘಟಕ, ಔಷಧ ಸಂಬಂಧೀ ರಾಸಾಯನಿಕ ವಸ್ತುಗಳನ್ನು ಯಾವುದೇ ಸಂಸ್ಕರಣೆ ಮೌಲ್ಯವರ್ಧನೆ ಮಾಡದ ಮರುಪ್ಯಾಕ್ ಘಟಕ, ಮರದ ಸಾಮಿಲ್, ಬೀಡಿ–ಸಿಗರೇಟು, ಗುಟ್ಕಾ, ತಂಬಾಕು ಘಟಕ, ರಿಯಾಕ್ಟೀವ್ ಡೈಸ್ ಸುಡುಮದ್ದು, ಪಟಾಕಿ ಉತ್ಪಾದನಾ ಘಟಕ, ಓರ್ಝೋನ್ ಘಟಕ, ವಿದ್ಯುತ್ ಲಾಂಡ್ರಿ, ಇಟ್ಟಿಗೆ ತಯಾರಿಕೆ ಘಟಕ, ಕೋಳಿ ಸಾಕಾಣಿಕೆ, ಪಾಪ್‌ಕಾರ್ನ್, ಐಸ್‌ಕ್ರೀಂ. ಐಸ್‌ಕ್ಯಾಂಡಿ ಘಟಕ, ಕಾಫಿಬೀಜ ಪುಡಿ ಘಟಕ, ಗಡಿಯಾರ, ಕೈಗಡಿಯಾರ ರಿಪೇರಿ ಘಟಕ, ದೃಶ್ಯ–ಶ್ರವಣ ಕ್ಯಾಸೆಟ್ ಘಟಕ ಹಾಗೂ ಸಯನೈಡ್ ಘಟಕಗಳಿಗೆ ಯಾವುದೇ ಬಗೆಯ ಉತ್ತೇಜನ, ರಿಯಾಯ್ತಿ ಇಲ್ಲವೇ ವಿಶೇಷ ಸವಲತ್ತುಗಳು ಲಭ್ಯವಿರುವುದಿಲ್ಲ. ಈ ನೂತನ ಕೈಗಾರಿಕಾ ನೀತಿಯು ೩೧–೦೩–೨೦೧೧ರವರೆಗೆ ಚಾಲ್ತಿಯಲ್ಲಿರುತ್ತದೆ.

**ಖನಿಜ ಸಂಪತ್ತು.** : ಖನಿಜಗಳ ಲಭ್ಯತೆ ಆರ್ಥಿಕಾಭಿವೃದ್ಧಿಯ ದಿಕ್ಕನ್ನು ನಿರ್ಧರಿಸುತ್ತವೆ. ಖನಿಜಗಳು ಕೈಗಾರಿಕೆಗಳಿಗೆ ಅವಶ್ಯವಾದ ಕಚ್ಚಾ ಸಂಪನ್ಮೂಲಗಳನ್ನು ಪೂರೈಸುತ್ತವೆ. ತಿ.ನರಸೀಪುರ ತಾಲೂಕಿನಲ್ಲಿ ಚಿನ್ನ (ಹುಂಜನಕೆರೆ ಭೂತಗಾನಹಳ್ಳಿ ಹಾಗೂ ಕರೋಟಿಕೊಪ್ಪಲು), ಕೊರಂಡಮ್ (ಕುಪ್ಪ) ಮೊದಲಾದವು ಲಭ್ಯವಿದ್ದು, ತಾಲೂಕಿನಲ್ಲಿ ಕೈಗಾರಿಕಾಭಿವೃದ್ಧಿಗೆ ಪೂರಕವಾಗಿವೆ. ತಾಲೂಕಿನಲ್ಲಿ ೨೦೦೪–೦೫ರಲ್ಲಿ ೬,೮೦,೦೦೦ ರೂ. ಮೌಲ್ಯದ ೬೮೦೦ ಟನ್ ಕಟ್ಟಡದ ಕಲ್ಲನ್ನು ಉತ್ಪಾದಿಸಲಾಗಿತ್ತು. ಇದರಿಂದ ಸರ್ಕಾರಕ್ಕೆ ರೂ.೧,೦೮,೦೫೦ ಆದಾಯ ಬಂದಿತ್ತು. ೨೦೦೫–೦೬ರಲ್ಲಿ ೮,೧೦,೦೦೦ ರೂ. ಮೌಲ್ಯದ ೮೧೦೦ ಟನ್ ಕಟ್ಟಡ ಕಲ್ಲು ಉತ್ಪಾದಿಸಲಾಗಿದ್ದು, ಇದರಿಂದ ರೂ.೧,೨೭,೭೮೪ ಗಳು ಸರ್ಕಾರಕ್ಕೆ ಆದಾಯವಾಗಿ ಬಂದಿದೆ.

**ಆಧುನಿಕ ಕೈಗಾರಿಕೆಗಳು** : ತಾಲೂಕಿನಲ್ಲಿ ಆಧುನಿಕ ಕೈಗಾರಿಕೆಗಳ ಸ್ಥಾಪನೆ ಮಂದಗತಿಯ ಬೆಳವಣಿಗೆಯಾಗಿದೆ. ಆದರೂ ೧೯೪೫ರ ವೇಳೆಗೆ ತಾಲೂಕು ಕೇಂದ್ರ ನರಸೀಪುರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ದಿ. ಮೈಸೂರು ಸಿಲ್ಕ್ ಫಿಲೇಚರ್‌ನಲ್ಲಿ (ಸ್ಥಾಪನೆ ೧೯೩೭) ಆರಂಭದಲ್ಲಿ ಕೇವಲ ೧೨೦ ಕಾರ್ಮಿಕರಿದ್ದು, ನೆರೆಯ ಗರ್ಗೇಶ್ವರಿಯಲ್ಲಿದ್ದ ಅಬ್ದುಲ್ ಘನಿ ಅಕ್ಕಿ ಗಿರಣಿಯಲ್ಲಿ ಹದಿನೇಳು ಕಾರ್ಮಿಕರಿದ್ದರು, ಅದೇ ೧೯೮೫ರ ವೇಳೆಗೆ ಈ ಸಿಲ್ಕ್ ಫಿಲೇಚರ್ ಕಾರ್ಖಾನೆಯಲ್ಲಿ ೨೮೦ ಕಾರ್ಮಿಕರು ದುಡಿಯುತ್ತಿದ್ದರು.. ಮಧು ಪೇಪರ್ ಮಿಲ್‌ನಲ್ಲಿ ೧೯೮೫–೮೬ರ ಸಾಲಿನಲ್ಲಿ ೭೩.೩೬ ಲಕ್ಷ ಟನ್ ಪೇಪರ್ ಉತ್ಪಾದನೆಯಾಗುತ್ತಿದ್ದು, ೩೧೮ ಕಾರ್ಮಿಕರು ಕಾರ್ಖಾನೆಯಲ್ಲಿ ದುಡಿಯುತ್ತಿದ್ದರು. ತಾಲೂಕಿನಲ್ಲಿ ರೂ. ೧೪ ಕೋಟಿ ಬಂಡವಾಳದೊಂದಿಗೆ ಚಾಮುಂಡೇಶ್ವರಿ ಡಿಸ್ಟಿಲರೀಸ್

೧೯೯೯ರಲ್ಲಿ ಸ್ಥಾಪನೆಗೊಂಡಿತ್ತು. ಇದರ ಕಾರ್ಮಿಕರಿಗೆ ಜಿ.ಪಿ.ಎಫ್. ಉಚಿತ ಊಟ ಮತ್ತಿತರ ಸೌಲಭ್ಯಗಳು ದೊರೆಯುತ್ತಿದೆ. ಪ್ರೀಮೀಯರ್ ಡ್ರೈಕೋ, ರಂಗನಾಥಪುರದಲ್ಲಿ ರೂ. ೭೩.೬೦ ಲಕ್ಷ ಬಂಡವಾಳದೊಂದಿಗೆ ಆರಂಭಗೊಂಡಿದ್ದು, ೩೧೮ ಕಾರ್ಮಿಕರಿಗೆ ಉದ್ಯೋಗ ನೀಡಿದೆ. ಸುಭಾಷ್ ಪೈಪ್ಸ್ ಪ್ರೈ.ಲಿ. ರಂಗನಾಥಪುರದಲ್ಲಿ ರೂ. ೩೭೬ ಲಕ್ಷ ಬಂಡವಾಳದೊಂದಿಗೆ ಸ್ಥಾಪನೆಗೊಂಡಿದ್ದು, ೮೨ ಮಂದಿಗೆ ಉದ್ಯೋಗ ನೀಡಿದೆ.

೨೦೦೮ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ಮಧ್ಯಮ ಪ್ರಮಾಣದ ಆರು, ಬೃಹತ್‌ಪ್ರಮಾಣದ ಒಂದು, ಹಾಗೂ ೧೬೧೨ ಸಣ್ಣಕೈಗಾರಿಕಾ ಘಟಕಗಳು (೪,೭೭೩ ಕಾರ್ಮಿಕರು) ವಿವಿಧ ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿದ್ದವು. ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಲ್ಲಿ ಎಲೆಕ್ಟ್ರಿಕಲ್ ಹಾಗೂ ಎಲೆಕ್ಟ್ರಾನಿಕ್ಸ್ (೧೬ ಘಟಕ, ೪೭ ಕಾರ್ಮಿಕರು) ರಾಸಾಯನಿಕ (೯೬–೪೮೦), ಫೆರಸ್–ನಾನ್‌ಫೆರಸ್ (೧೧–೧೫) ಆಹಾರ ಮತ್ತು ಮಾದಕ ವಸ್ತು (೨೨೫–೫೧೮) ಗ್ಲಾಸ್ ಮತ್ತು ಸೆರಾಮಿಕ್ಸ್ (೨೧–೮೩) ಚರ್ಮ (೫೩–೧೦೬), ಮೆಕ್ಯಾನಿಕಲ್ (೧೪೧–೫೧೪), ಕಾಗದ ಮತ್ತು ಮುದ್ರಣ (೧೨–೪೧) ರಬ್ಬರ್ ಮತ್ತು ಪ್ಲಾಸ್ಟಿಕ್ (೧೧–೩೩) ಜವಳಿ (೨೨೪–೪೭೩) ಮರ (೩೬೧–೮೦೭), ಜಾಬ್‌ವರ್ಕ್ ಮತ್ತು ರಿಪೇರಿ (೭೩–೧೬೬) ಹಾಗೂ ಇತರೆ ಸಣ್ಣ ಕೈಗಾರಿಕಾ ಘಟಕಗಳು (೩೬೮–೧೪೯೦) ಉತ್ಪಾದನೆಯಲ್ಲಿ ತೊಡಗಿದ್ದವು. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ಬೃಹತ್‌ಪ್ರಮಾಣದ ಒಂದು ಮಧ್ಯಮ ಪ್ರಮಾಣದ ಆರು ಹಾಗೂ ೧೬೯೮ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿದ್ದವು. ೨೦೦೨–೨೦೦೩ರಿಂದ ೨೦೦೭–೦೮ರವರೆಗೆ ತಿರುಮಕೂಡಲು ನರಸೀಪುರ ತಾಲೂಕಿನಲ್ಲಿ ನೋಂದಾಯಿಸಲ್ಪಟ್ಟಿದ್ದ ಸಣ್ಣ ಪ್ರಮಾಣದ ಕೈಗಾರಿಕೆಗಳ ವಿವರ:

(ಸಂಖ್ಯೆಗಳಲ್ಲಿ)

| ಕ್ರ.ಸಂ. | ವಿವರ | | ೨೦೦೨–೦೩ | ೨೦೦೩–೦೪ | ೨೦೦೪–೦೫ | ೨೦೦೭–೦೮ |
|---|---|---|---|---|---|---|
| ೧ | ಆಟೋಮೊಬೈಲ್ | ಸಂಖ್ಯೆ | ೦ | ೦ | ೦ | ೦ |
| | | ಕೆಲಸಗಾರರು | ೦ | ೦ | ೦ | ೦ |
| ೨ | ಎಲೆಕ್ಟ್ರಿಕಲ್ ಮತ್ತು | ಸಂಖ್ಯೆ | ೧೫ | ೧೫ | ೧೫ | ೧೮ |
| | ಎಲೆಕ್ಟ್ರಾನಿಕ್ಸ್ | ಕೆಲಸಗಾರರು | ೪೫ | ೪೫ | ೪೫ | ೫೨ |
| ೩ | ಕೆಮಿಕಲ್ಸ್ | ಸಂಖ್ಯೆ | ೯೬ | ೯೬ | ೯೬ | ೯೭ |
| | | ಕೆಲಸಗಾರರು | ೪೮೦ | ೪೮೦ | ೪೮೦ | ೪೯೦ |
| ೪ | ಫೆರಸ್ ಮತ್ತು | ಸಂಖ್ಯೆ | ೦ | ೦ | ೦ | ೧೧ |
| | ನಾನ್‌ಫೆರಸ್ | ಕೆಲಸಗಾರರು | ೦ | ೦ | ೦ | ೧೫ |
| ೫ | ಆಹಾರ ಮತ್ತು | ಸಂಖ್ಯೆ | ೨೧೮ | ೨೧೮ | ೨೧೮ | ೨೩೨ |
| | ಮಾದಕ ವಸ್ತುಗಳು | ಕೆಲಸಗಾರರು | ೪೮೬ | ೪೮೬ | ೪೮೬ | ೫೭೬ |
| ೬ | ಗ್ಲಾಸ್ ಮತ್ತು ಸಿರಾಮಿಕ್ಸ್ | ಸಂಖ್ಯೆ | ೨೧ | ೨೧ | ೨೧ | ೨೨ |
| | | ಕೆಲಸಗಾರರು | ೮೩ | ೮೩ | ೮೩ | ೧೦೧ |
| ೭ | ಜಾಬ್ ವರ್ಕ್ಸ್ | ಸಂಖ್ಯೆ | ೭೧ | ೭೧ | ೭೧ | ೮೯ |
| | ಮತ್ತು ರಿಪೇರಿ | ಕೆಲಸಗಾರರು | ೧೬೨ | ೧೬೨ | ೧೬೨ | ೯೩ |
| ೮ | ಚರ್ಮ | ಸಂಖ್ಯೆ | ೫೩ | ೫೩ | ೫೩ | ೫೩ |
| | | ಕೆಲಸಗಾರರು | ೧೦೬ | ೧೦೬ | ೧೦೬ | ೧೦೬ |
| ೯ | ಮೆಕ್ಯಾನಿಕಲ್ | ಸಂಖ್ಯೆ | ೧೩೪ | ೧೩೩ | ೧೩೪ | ೧೪೨ |
| | ಇಂಜಿನಿಯರಿಂಗ್ | ಕೆಲಸಗಾರರು | ೫೦೧ | ೪೯೯ | ೫೦೧ | ೫೧೯ |
| ೧೦ | ಕಾಗದ ಮತ್ತು ಮುದ್ರಣ | ಸಂಖ್ಯೆ | ೧೧ | ೧೧ | ೧೧ | ೧೨ |
| | | ಕೆಲಸಗಾರರು | ೩೩ | ೩೩ | ೩೩ | ೪೧ |
| ೧೧ | ರಬ್ಬರ್ ಮತ್ತು ಪ್ಲಾಸ್ಟಿಕ್ | ಸಂಖ್ಯೆ | ೧೧ | ೧೧ | ೧೧ | ೧೧ |
| | | ಕೆಲಸಗಾರರು | ೩೩ | ೩೩ | ೩೩ | ೩೩ |
| ೧೨ | ಟೆಕ್ಸ್‌ಟೈಲ್ಸ್ | ಸಂಖ್ಯೆ | ೨೧೬ | ೨೧೬ | ೨೧೬ | ೨೨೬ |
| | | ಕೆಲಸಗಾರರು | ೪೫೨ | ೪೫೨ | ೪೫೨ | ೪೮೯ |
| ೧೩ | ಮರ | ಸಂಖ್ಯೆ | ೩೩೧ | ೩೨೫ | ೩೩೧ | ೪೬೩ |
| | | ಕೆಲಸಗಾರರು | ೭೫೬ | ೭೫೦ | ೭೫೬ | ೧೦೧೧ |
| ೧೪ | ಇತರೆ | ಸಂಖ್ಯೆ | ೩೬೪ | ೩೫೬ | ೩೬೪ | ೩೬೮ |
| | | ಕೆಲಸಗಾರರು | ೧೪೮೪ | ೧೪೬೪ | ೧೪೮೪ | ೧೪೯೦ |
| ೧೫ | ಒಟ್ಟು | ಸಂಖ್ಯೆ | ೧೫೪೧ | ೧೫೨೬ | ೧೫೪೧ | ೧೭೪೪ |
| | | ಕೆಲಸಗಾರರು | ೪೬೨೧ | ೪೫೭೩ | ೪೬೨೧ | ೫೧೧೬ |



**ಕರಕುಶಲ ಕೈಗಾರಿಕೆ :** ಈ ಕೈಗಾರಿಕೆಯು ತಾಲೂಕಿನಲ್ಲಿ ಕಂಡು ಬರುತ್ತಿದ್ದು, ಮರ, ಶಿಲೆ, ಲೋಹಗಳಿಂದ ಮೂರ್ತಿ ಕೆತ್ತನೆ; ಬಿದಿರು ಉತ್ಪನ್ನಗಳ ತಯಾರಿಕೆ ಮುಂತಾದವನ್ನು ಉದಾಹರಿಸಬಹುದಾಗಿದೆ. ತಾಲೂಕಿನಲ್ಲಿ ೬೦೦ ಮಂದಿ ಮರಗೆಲಸದಲ್ಲೂ, ೫೯೦ ಮಂದಿ ಕಮ್ಮಾರಿಕೆಯಲ್ಲೂ, ೨೦೦ ಮಂದಿ ಕುಂಬಾರಿಕೆಯಲ್ಲೂ, ೨೫೦ ಮಂದಿ ದೋಬಿವೃತ್ತಿಯಲ್ಲೂ, ೧೮೦ ಮಂದಿ ಕ್ಷೌರಿಕವೃತ್ತಿಯಲ್ಲೂ, ೧೫೦ ಮಂದಿ ಮೇದಾರಿಕೆಯಲ್ಲೂ, ೫೦ ಮಂದಿ ಸುಣ್ಣ ತಯಾರಿಕೆಯಲ್ಲೂ, ೧೨೫ ಮಂದಿ ಚಮ್ಮಾರಿಕೆಯಲ್ಲೂ, ೧೫೦ ಮಂದಿ ಚಾಪೆ ತಯಾರಿಕೆಯಲ್ಲೂ, ೧೦೦ ಮಂದಿ ಉಣ್ಣೆನೇಯ್ಗೆಯಲ್ಲೂ, ೩೫೦ ಮಂದಿ ಹೊಲಿಗೆಯಲ್ಲೂ, ೮೦ ಮಂದಿ ಚಿನ್ನ ಮತ್ತು ಬೆಳ್ಳಿ ಆಭರಣ ತಯಾರಿಕೆಯಲ್ಲೂ, ೬೦ ಮಂದಿ ತೆಂಗಿನನಾರು ಉದ್ದಿಮೆಯಲ್ಲೂ, ೧೦೦ ಮಂದಿ ಹತ್ತಿನೇಯ್ಗೆಯಲ್ಲೂ ೨೦೦ ಮಂದಿ ಅಗರಬತ್ತಿ ಉದ್ಯಮದಲ್ಲೂ, ೮೦ ಮಂದಿ ನಿಟ್ಟಿಂಗ್ ಹಾಗೂ ೧೦೦ ಮಂದಿ ಜೇನು ಸಾಕಾಣಿಕೆಯಲ್ಲೂ ಹೀಗೆ ಒಟ್ಟು ೩೩೬೫ ಮಂದಿ ಕುಶಲಕರ್ಮಿಗಳು ಕಾರ್ಯನಿರತರಾಗಿದ್ದರೆಂದು ತಿಳಿದುಬರುತ್ತಿದೆ.

**ರೇಷ್ಮೆ ಕೈಗಾರಿಕೆ :** ರೇಷ್ಮೆ ಕೃಷಿಯ ಇತಿಹಾಸವನ್ನು ತಾಲೂಕಿನಲ್ಲಿ ೧೮ನೇ ಶತಮಾನದ ಕೊನೆಯ ದಶಕಗಳಷ್ಟು ಹಿಂದಕ್ಕೆ ಗುರುತಿಸಬಹುದಾಗಿದ್ದು, ೧೯ನೆಯ ಶತಮಾನದ ಅಂತ್ಯದ ವೇಳೆಗೆ ಸಾಕಷ್ಟು ಜನಪ್ರಿಯತೆ ಪಡೆದಿತ್ತು. ಹಿಪ್ಪುನೇರಳೆ ಬೇಸಾಯ, ರೇಷ್ಮೆ ಹುಳುಗಳ ಸಾಕಣಿಕೆ ಹಾಗೂ ಕೈಮಗ್ಗಗಳು ಇದರಲ್ಲಿ ಮಿಳಿತವಾಗಿದೆ. ತಾಲೂಕಿನ ಜನರ ಸಾಂಪ್ರದಾಯಕ ವೃತ್ತಿಗಳಲ್ಲಿ ಇದೂ ಒಂದಾಗಿದ್ದು, ೧೯೮೭ರ ಅಂತ್ಯಕ್ಕೆ ತಾಲೂಕಿನ ೧೭೦ (ಕಂದಾಯ+ಉಪ) ಗ್ರಾಮಗಳಲ್ಲಿನ ೧೪,೪೪೦ ಎಕರೆ ಪ್ರದೇಶವು ರೇಷ್ಮೆ ಬೇಸಾಯಕ್ಕೆ ಒಳಪಟ್ಟಿದ್ದು, ೧೧,೪೦೫ ರೈತರು ಇದರಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು, ರೇಷ್ಮೆ ಅಭಿವೃದ್ಧಿಗಾಗಿ ೧೯೮೭ರ ವೇಳೆಗೆ ರೇಷ್ಮೆ ಕ್ಷೇತ್ರವನ್ನು ತಾಲೂಕಿನ ವರಳಹಳ್ಳಿ ಹಾಗೂ ಮೂಗೂರುಗಳಲ್ಲಿ ಆರಂಭಿಸಲಾಗಿತ್ತು. ಅಲ್ಲದೇ ರೇಷ್ಮೆ ಬೆಳೆಗಾರರಿಗೆ ಉತ್ತಮ ಬೆಲೆ ಲಭಿಸಲೆಂಬ ಉದ್ದೇಶದಿಂದ ನರಸೀಪುರದಲ್ಲೂ ರೇಷ್ಮೆ ಗೂಡಿನ ಮಾರುಕಟ್ಟೆಯನ್ನು ಆರಂಭಿಸಲಾಗಿತ್ತು. ಸರ್ಕಾರಿ ರೇಷ್ಮೆ ಫಿಲೇಚರ್ ಘಟಕವನ್ನು ನರಸೀಪುರದಲ್ಲಿ ಬಹಳ ಹಿಂದೆಯೇ (೧೯೩೭) ಆರಂಭಿಸಲಾಗಿದ್ದು, ೧೯೮೭ರ ವೇಳೆಗೆ ಇದರ ಸ್ಥಿರಾಸ್ತಿ ಮೌಲ್ಯವು ೭೯೭ ಲಕ್ಷ ರೂ.ಗಳಷ್ಟಿತ್ತು. ರೂ.೧೭೫.೮೪ ಲಕ್ಷ ರೂ. ಮೌಲ್ಯದ ೨೯,೪೧೧ ಕಿಲೊ ರೇಷ್ಮೆ ನೂಲನ್ನು ೧೯೮೬-೮೭ನೇ ಸಾಲಿನಲ್ಲಿ ಇದು ಉತ್ಪಾದಿಸಿದ್ದು, ಕಾರ್ಖಾನೆಯಲ್ಲಿ ೩೧೯ ಕೆಲಸಗಾರರಿದ್ದರು. ರೇಷ್ಮೆ ಸಹಕಾರಿ ಸಂಘ ಹಾಗೂ ರೇಷ್ಮೆ ನೂಲುಗಾರರ ಸಂಘಗಳು ತಾಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಕೇಂದ್ರೀಯ ರೇಷ್ಮೆ ನಿಗಮವು ಮೂಗೂರಿನಲ್ಲಿ ಬಹುತಳಿ ರೇಷ್ಮೆ ಮೊಟ್ಟೆಯ ಅಭಿವೃದ್ಧಿಗಾಗಿ ಪ್ರಾದೇಶಿಕ ಸಂಶೋಧನಾ ಕೇಂದ್ರವನ್ನು ೧೯೮೭ರ ವೇಳೆಗಾಗಲೇ ಆರಂಭಿಸಿದ್ದು, ಅದು ಸಂಶೋಧನಾ ಕಾರ್ಯದಲ್ಲಿ ತೊಡಗಿತು. ತಾಲೂಕಿನಲ್ಲಿ ೨೦೦೮-೯ರಲ್ಲಿ ೫೩೯.೪೬ ಹೆಕ್ಟೇರು ಪ್ರದೇಶದಲ್ಲಿ ಹಿಪ್ಪುನೇರಳೆ ಬೆಳೆದು, ೪೧೯.೧೬ ಲಕ್ಷ ರೂ. ಮೌಲ್ಯದ ೨೯೨.೨೬ ಟನ್ ರೇಷ್ಮೆಗೂಡು ಉತ್ಪಾದನೆ ಮಾಡಲಾಗಿತ್ತು. ೧೨೧೯ ರೈತರು ಈ ಕೃಷಿಯಲ್ಲಿ ತೊಡಗಿದ್ದರು.

**ಹೋಟೆಲು ಉದ್ಯಮ :** ಪ್ರವಾಸೋದ್ಯಮದ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಹೋಟೆಲು ಉದ್ಯಮಕ್ಕೆ ಸರ್ಕಾರವು ೧೯೬೧ರಷ್ಟು ಹಿಂದಿನಿಂದಲೇ ಆರ್ಥಿಕ ನೆರವನ್ನು ನೀಡಲು ಮುಂದಾಯಿತಾದರೂ ತಾಲೂಕಿನಲ್ಲಿ ಆಗ ಯಾವುದೇ ಅಧಿಕೃತ ಹೋಟೇಲುಗಳಿರಲಿಲ್ಲ. ಆದರೆ ೧೯೮೭ರ ವೇಳೆಗೆ ತಾಲೂಕಿನಲ್ಲಿದ್ದ ೯೧ ಹೋಟೇಲುಗಳಲ್ಲಿ ೧೮೦ ಕೆಲಗಾರರು ದುಡಿಯುತ್ತಿದ್ದು, ತಾಲೂಕು ಕೇಂದ್ರ ನರಸೀಪುರ ಹಾಗೂ ಹೋಬಳಿ ಕೇಂದ್ರಗಳಾದ ಬನ್ನೂರು ಹಾಗೂ ತಲಕಾಡು, ಪ್ರವಾಸಿತಾಣ ಸೋಮನಾಥಪುರಗಳಲ್ಲಿ ಇವು ಇದ್ದವು. ಅಲ್ಲದೇ ಬನ್ನೂರು ಪುರಸಭೆಯೊಂದೇ ೪೮ ಹೋಟೆಲುಗಳಿಗೆ ಪರವಾನಗಿ ನೀಡಿದ್ದು ಅದರಲ್ಲಿ ೮೪ ಕೆಲಸಗಾರರಿದ್ದರು. ಇತ್ತೀಚೆಗೆ ಹೋಟೆಲು ಉದ್ಯಮವು ಇತರೆಡೆಗಳಂತೆ ತಾಲೂಕಿನಲ್ಲೂ ಗಣನೀಯ ಪ್ರಮಾಣದಲ್ಲಿ ಬೆಳೆಯುತ್ತಿದೆ.

**ಬೀಡಿ ಉದ್ಯಮ :** ತಾಲೂಕಿನಲ್ಲಿ ೧೯೮೭ರ ವೇಳೆಗೆ ಏಳು ಖಾಸಗಿ ಬೀಡಿ ಕಾರ್ಖಾನೆಗಳಿದ್ದು, ಅವುಗಳಲ್ಲಿ ಕೆಲಸಗಾರರು ಗಣನೀಯ ಸಂಖ್ಯೆಯಲ್ಲಿ ದುಡಿಯುತ್ತಿದ್ದರು. ಅದೇ ಪರಿಸ್ಥಿತಿ ಇಂದಿಗೂ ಮುಂದುವರಿದಿದೆ.



**ವಿದ್ಯುತ್:** ಕೈಗಾರಿಕೆಯ ಅಭಿವೃದ್ಧಿಯಲ್ಲಿ ವಿದ್ಯುಚ್ಛಕ್ತಿ ಮಹತ್ವದ ಪಾತ್ರ ವಹಿಸುತ್ತಿದ್ದು, ಶಿಂಷಾ ಹಾಗೂ ಶರಾವತಿ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ನರಸೀಪುರ ತಾಲೂಕು ಸೇರಿದಂತೆ ಜಿಲ್ಲೆಗೆ ವಿದ್ಯುತ್ ಸರಬರಾಜಾಗುತ್ತಿದೆ. ಆದರೆ ತಾಲೂಕು ಕೇಂದ್ರ ನರಸೀಪುರಕ್ಕೆ ವಿದ್ಯುತ್ ಸರಬರಾಜಾದದ್ದು ೧೯೨೮ರ ನಂತರವೇ. ತಾಲೂಕಿನ ಅಗತ್ಯವನ್ನು ೧೯೮೭ರ ವೇಳೆಗೆ ೧೧ ಕಿ.ವ್ಯಾ ಸಾಮರ್ಥ್ಯದ ೨೮೧.೩೬೩ ಕಿ.ಮೀ. ವಿದ್ಯುತ್ ಮಾರ್ಗ ಹಾಗೂ ೧,೧೪೪.೨೬೦ ಎಲ್.ಟಿ. ಮಾರ್ಗಗಳ ಮೂಲಕ ನೀಗಿಸಲಾಗುತ್ತಿತ್ತು. ಅಲ್ಲದೆ ಆ ವೇಳೆಗೆ ತಾಲೂಕಿನ ೧೨೨ ಜನವಸತಿ ಗ್ರಾಮ ಹಾಗೂ ಏಳು ಉಪಗ್ರಾಮಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿದ್ದು, ೧೪,೮೯೨ (೧.೭೪ ಮೆ.ವ್ಯಾ) ಗೃಹಬಳಕೆ ೧೦೦೬ ಮನೆ (೭.೦೨ಮೆವ್ಯಾ)ಗಳಿಗೆ ಸಂಪೂರ್ಣ ವಿದ್ಯುತ್ ಸಂಪರ್ಕ, ೧೬೬೨ (೦.೧೯ ಮೆ.ವ್ಯಾ) ವಾಣಿಜ್ಯ ಸಂಪರ್ಕ, ೧೨೧೨ (೪.೫೪ ಮೆ.ವ್ಯಾ) ನೀರಾವರಿ ಪಂಪ್‌ಸೆಟ್, ೬೭೫ (೨.೫೩ ಮೆ.ವ್ಯಾ) ಎಲ್.ಟಿ. ೫೩ (೦.೧೯ ಮೆ.ವ್ಯಾ) ಕುಡಿಯುವ ನೀರು ಉಪಯೋಗಕ್ಕೆ, ೨,೬೨೩ ಬೀದಿ ದೀಪ, ಐದು ಎಚ್.ಟಿ.ಸಂಪರ್ಕ, (೪.೮೮ ಮೆ.ವ್ಯಾ) ಹಾಗೂ ೧,೫೦೨ ಭಾಗ್ಯಜ್ಯೋತಿ (ಎಲ್ಲಾ ಸೇರಿ ೨೩,೬೩೦) ಸಂಪರ್ಕವನ್ನು ಒದಗಿಸಲಾಗಿತ್ತು. (ಕಂಸದಲ್ಲಿರುವ ಅಂಕಿ ಅಂಶ ವಿದ್ಯುತ್ ಬೇಡಿಕೆ ಪ್ರಮಾಣವನ್ನು ಸೂಚಿಸುತ್ತದೆ. ಇತ್ತೀಚೆಗೆ ಭೂರೂವ ವಿದ್ಯುತ್ ಕಂಪನಿಯು ಹೆಮ್ಮಿಗೆ ಬಳಿ, ಮಾಧವಮಂತ್ರಿ ಅಣೆಕಟ್ಟೆಯ ಸನಿಹದಲ್ಲಿ ಕಾವೇರಿ ನೀರನ್ನು ಬಳಸಿಕೊಂಡು ವಿದ್ಯುತ್ ಉತ್ಪಾದಿಸಿ, ರಾಜ್ಯ ವಿದ್ಯುತ್ ಮಂಡಳಿಗೆ ಮಾರಾಟ ಮಾಡುತ್ತಿದೆ. ತಾಲೂಕಿನಲ್ಲಿ ೨೦೦೮ರ ಮಾರ್ಚ್ ಅಂತ್ಯಕ್ಕೆ ವಿದ್ಯುಚ್ಛಕ್ತಿ ಬಳಕೆದಾರರ ವಿವರಗಳನ್ನು ಸಂಖ್ಯೆಯಲ್ಲಿ ಇಲ್ಲಿ ನೀಡಲಾಗಿದೆ. ೫೬,೭೪೯ (೧೪೧.೨೧) ಗೃಹಬಳಕೆ ೭೫೨ (೧೦೩.೨೧) ಮತ್ತು ಕೈಗಾರಿಕೆ ಬಳಕೆ ೩೩೭೪ (೧೯.೬೨) ವಾಣಿಜ್ಯ ಬಳಕೆ ೭,೦೪೬ (೫೦೧.೨೨) ನೀರಾವರಿ ಪಂಪ್‌ಸೆಟ್‌ಗಳು ಹಾಗೂ ೩೮೨ (೩೦.೬೧) ಬೀದಿ ದೀಪಗಳು ವಿದ್ಯುತ್ ಸೌಲಭ್ಯ ಪಡೆದಿದ್ದವು. ಆವರಣದಲ್ಲಿ ಕೊಟ್ಟಿರುವ ಅಂಕಿಅಂಶಗಳು ವಿದ್ಯಚ್ಛಕ್ತಿ ಬಳಕೆಯನ್ನು ಲಕ್ಷ ಯೂನಿಟ್‌ಗಳಲ್ಲಿ ನೀಡಲಾಗಿದೆ. ಇದೇ ಅವಧಿಯಲ್ಲಿ ರೂ. ೧,೪೮೫.೭೨ ಲಕ್ಷ ರೂ.ಗಳು ವಿದ್ಯುತ್ ಬಳಕೆಯಿಂದ ಬಂದ ಆದಾಯವಾಗಿತ್ತು.

**ಕೈಗಾರಿಕಾ ಸಾಧ್ಯತೆಗಳು :** ತಾಲೂಕಿನಲ್ಲಿ ಪುಷ್ಪೋದ್ಯಮ, ರೇಷ್ಮೆ, ಆಹಾರೋದ್ಯಮ ರಂಗದಲ್ಲಿ, ಬೇಕರಿ, ರಾಗಿ ಆಹಾರ ಆಧಾರಿತ ಉದ್ಯಮ, ಹಣ್ಣಿನ ರಸದ ಉದ್ಯಮ: ಊಟದ ಎಲೆ ತಯಾರಿಕೆ, ಪ್ಲಾಸ್ಟಿಕ್ ಉತ್ಪನ್ನ, ತೆಂಗಿನ ನಾರು ಮತ್ತಿತರ ಉದ್ಯಮಗಳನ್ನು ಸ್ಥಾಪಿಸಲು ಅವಕಾಶವಿದೆ.

**ಆರ್ಥಿಕ ಪ್ರವೃತ್ತಿಗಳು :** ಈ ತಾಲೂಕು ಪ್ರಧಾನವಾಗಿ ಕೃಷಿಯನ್ನೇ ಅವಲಂಬಿಸಿದ್ದು, ನೀರಾವರಿ ಸೌಲಭ್ಯವಿರುವೆಡೆ ಕೃಷಿಕರು ವರ್ಷಕ್ಕೆ ಎರಡು ಬೆಳೆ ತೆಗೆಯುವ ಮೂಲಕ ಸುಧಾರಿತ ಬದುಕನ್ನು ರೂಪಿಸಿಕೊಳ್ಳಲು ಸಾಧ್ಯವಾಗಿದೆ. ದುಡಿಯುವ ವರ್ಗದಲ್ಲಿ ೬೯ ಶೇ. ಜನ ಕೃಷಿ ಕ್ಷೇತ್ರದಲ್ಲಿ ತೊಡಗಿರುವುದು ತಾಲೂಕಿನ ಅರ್ಥವ್ಯವಸ್ಥೆ ಕೃಷಿ ಪ್ರಧಾನವಾಗಿರುವ ಅಂಶವನ್ನು ಬಿಂಬಿಸುತ್ತದೆ. ತೋಟಗಾರಿಕೆ, ಪಶುಸಂಗೋಪನೆ,

ಮೀನುಗಾರಿಕೆ, ಕೋಳಿಸಾಕಣೆ, ರೇಷ್ಮೆ ಉದ್ಯಮಗಳೂ ಕೂಡ ತಾಲೂಕಿನ ಅರ್ಥವ್ಯವಸ್ಥೆಯ ಮೇಲೆ ಸಾಕಷ್ಟು ಪ್ರಭಾವ ಬೀರುತ್ತಿವೆ. ಕೈಗಾರಿಕಾ ದೃಷ್ಟಿಯಿಂದ ವಲಯ I ಕ್ಕೆ ಸೇರಿರುವ ಈ ತಾಲೂಕಿನಲ್ಲಿ ಬೃಹತ್ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕೆಗಳ ಬೆಳವಣಿಗೆಗೆ ಅವಕಾಶವಿದ್ದು, ಸಣ್ಣ ಹಾಗೂ ಅತೀ ಸಣ್ಣ ಕೈಗಾರಿಕೆಗಳು ಗಣನೀಯ ಪ್ರಮಾಣದಲ್ಲಿ ಬೆಳೆಯುತ್ತಿದ್ದು, ಸರ್ಕಾರದ ಪ್ರೋತ್ಸಾಹದಾಯಕ ಕೈಗಾರಿಕಾ ನೀತಿಗಳಿಂದಾಗಿ ಅವು ಇನ್ನಷ್ಟು ಹೆಚ್ಚಳಗೊಳ್ಳುವ ಸಾಧ್ಯತೆ ಇದೆ. ಗುಡಿಕೈಗಾರಿಕೆ, ಖಾದಿಗ್ರಾಮೋದ್ಯೋಗಗಳು ಗ್ರಾಮೀಣ ಪ್ರದೇಶದಲ್ಲಿ ಬೆಳೆಯಲು ಉತ್ತಮ ಅವಕಾಶವಿದೆ. ತಾಲೂಕಿನ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ, ಸಾರಿಗೆ ಮತ್ತು ಸಂಪರ್ಕ ಸಾಧನಗಳೂ ಸೇರಿದಂತೆ,ಮೂಲಭೂತ ಸೌಕರ್ಯಗಳೂ ಪ್ರಗತಿಪಥದಲ್ಲಿ ಸಾಗಿದ್ದು, ಮಾಹಿತಿ ತಂತ್ರಜ್ಞಾನದ ಪ್ರಭಾವವನ್ನು ಇಲ್ಲಿ ಗುರುತಿಸಬಹುದಾಗಿದೆ. ತಾಲೂಕಿನಲ್ಲಿರುವ ಸೋಮನಾಥಪುರ, ತಲಕಾಡು, ಮಡುಕುತೊರೆ, ನರಸೀಪುರ, ಬನ್ನೂರು, ತಿರುಮಕೂಡಲು, ಮುಂತಾದ ಪ್ರವಾಸಿ ಕೇಂದ್ರಗಳು ಪ್ರವಾಸಿಗರನ್ನು ಆಕರ್ಷಿಸುತ್ತಿದ್ದು, ಈ ಸ್ಥಳಗಳನ್ನು ಅಭಿವೃದ್ಧಿಪಡಿಸುವ ಮೂಲಕ ತಾಲೂಕಿನ ಆ ಭಾಗದ ಜನರ ಆರ್ಥಿಕ ಬದುಕನ್ನೂ ಸುಧಾರಿಸಬಹುದಾಗಿದೆ.

**ಕಾರ್ಮಿಕರು ಮತ್ತು ಕಾರ್ಮಿಕರಲ್ಲದವರು** : ಒಂದು ಸಮಾಜದ ಆರ್ಥಿಕ ಬದುಕನ್ನು ರೂಪಿಸುವಲ್ಲಿ ಕಾರ್ಮಿಕ ಶಕ್ತಿ ಮಹತ್ವದ ಪಾತ್ರ ವಹಿಸುತ್ತದೆ. ೧೫–೬೨ ವಯೋಮಾನದವರನ್ನು ದುಡಿಯುವ ವರ್ಗದವರೆಂದು ಪರಿಗಣಿಸಲಾಗಿದ್ದು, ೨೦೦೧ರ ಜನಗಣತಿಯಂತೆ ತಾಲೂಕಿನ ಜನಸಂಖ್ಯೆಯಲ್ಲಿ (೨,೭೯,೦೦೫), ೨,೪೫,೮೩೯ (ಶೇ. ೮೮.೧೧) ಮಂದಿ ಗ್ರಾಮೀಣ ಪ್ರದೇಶದಲ್ಲೂ ೩೩,೧೬೬ (ಶೇ. ೧೧.೮೯) ನಗರ ಪ್ರದೇಶದಲ್ಲೂ ವಾಸಿಸುತ್ತಿದ್ದಾರೆ. ಇಲ್ಲಿ ೧,೦೮,೦೨೮ (ಶೇ. ೩೮.೭೨) ಒಟ್ಟು ಕೆಲಸಗಾರರಿದ್ದು, ೮೨,೪೨೩ (ಶೇ. ೭೬.೩೦) ಮಂದಿ ಮುಖ್ಯ ಕೆಲಸಗಾರರು, ೨೫,೬೦೫ (೨೩.೭೦) ಮಂದಿ ಸೀಮಾಂತ (ಮಾರ್ಜಿನಲ್) ಕೆಲಸಗಾರರಿದ್ದರು. ಅಲ್ಲದೆ ೧,೭೦,೯೭೭ (ಶೇ. ೬೧.೨೮) ಮಂದಿ ಕೆಲಸಗಾರರಲ್ಲದವರಿದ್ದರು. ೮೨,೪೨೩ ಮಂದಿ ಮುಖ್ಯ ಕೆಲಸಗಾರರಲ್ಲಿ ೩೫,೪೯೦ (ಶೇ. ೪೩) ವ್ಯವಸಾಯಗಾರರಾಗಿಯೂ, ೨೩,೦೭೪ (ಶೇ. ೨೭.೯೯) ಮಂದಿ ಕೃಷಿ ಕಾರ್ಮಿಕರಾಗಿಯೂ, ೧,೧೦೯ (ಶೇ. ೧.೩೫) ಮಂದಿ ಗೃಹ ಕೈಗಾರಿಕೆಗಳಲ್ಲಿಯೂ ಹಾಗೂ ೨೨,೭೫೦ (ಶೇ. ೨೭.೬೦) ಮಂದಿ ಇತರೆ ಕೆಲಸಗಾರರಿದ್ದರು. ೨೫,೬೦೫ ಮಂದಿ ಮಾರ್ಜಿನಲ್ ಕೆಲಸಗಾರರಲ್ಲಿ ೧,೩೮೨ (ಶೇ. ೫.೪) ವ್ಯವಸಾಯಗಾರರಾಗಿಯೂ, ೨೧,೭೪೩ (ಶೇ. ೮೪.೯೨) ಮಂದಿ ಕೃಷಿ ಕಾರ್ಮಿಕರಾಗಿಯೂ, ೨೬೫ (ಶೇ. ೧.೦೩) ಮಂದಿ ಗೃಹ ಕೈಗಾರಿಕೆಗಳಲ್ಲಿಯೂ ಹಾಗೂ ೨೨೧೫ (ಶೇ. ೮.೬೫) ಮಂದಿ ಇತರೆ ಕೆಲಸಗಾರರಿದ್ದರು.

**ಉದ್ಯೋಗ** : ತಾಲೂಕಿನಲ್ಲಿ ಕೃಷಿ ಪ್ರಧಾನ ಉದ್ಯೋಗವಾಗಿದ್ದು, ಹೆಚ್ಚಿನ ಮಂದಿ ಕೃಷಿಯನ್ನೇ ಅವಲಂಬಿಸಿದ್ದರೂ, ವ್ಯವಸಾಯೇತರ ಉದ್ಯೋಗವನ್ನು ಅವಲಂಬಿಸಿರುವವರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ತಾಲೂಕಿನ ವಿದ್ಯಾವಂತ ವರ್ಗದವರಲ್ಲಿ ೨೦೦೫ರ



ಮಾರ್ಚ್ ಅಂತ್ಯಕ್ಕೆ ಎಸ್.ಎಸ್.ಎಲ್.ಸಿ.ಗಿಂತ ಕಡಿಮೆ ಶಿಕ್ಷಣ ಪಡೆದಿದ್ದ ೪೯೫ ಮಂದಿ, ಎಸ್.ಎಸ್.ಎಲ್.ಸಿ. ಪಾಸಾದ ೧೮೨೫ ಮಂದಿ,ಪಿ.ಯು.ಸಿ. ಪಾಸಾದ ೫೧೫ ಮಂದಿ, ೮೯ ಮಂದಿ ಬಿ.ಎ., ೨೪ ಮಂದಿ ಬಿ.ಎಸ್.ಸಿ., ೨೬ ಮಂದಿ ಬಿ.ಕಾಂ ಪದವೀಧರರು ಹಾಗೂ ಆರು ಮಂದಿ ಶೀಘ್ರಲಿಪಿಗಾರರು ಉದ್ಯೋಗಾಕಾಂಕ್ಷಿಗಳಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಣಿಸಿದ್ದರು. ೨೦೦೮ರ ಮಾರ್ಚ್ ಅಂತ್ಯಕ್ಕೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ವಿವಿಧ ಗುಂಪಿಗೆ ಸೇರಿದ ಒಟ್ಟು ೨೯೨೯೬ ಉದ್ಯೋಗಾಕಾಂಕ್ಷಿಗಳು ಜಿಲ್ಲೆಯಲ್ಲಿ ನೋಂದಣಿಸಿಕೊಂಡಿದ್ದು ತಿಳಿದುಬರುತ್ತದೆ. ಆದರೆ ತಾಲೂಕಿಗೆ ಸಂಬಂಧಿಸಿದಂತೆ ಪೂರ್ಣ ವಿವರ ಲಭ್ಯವಿರುವುದಿಲ್ಲ.

**ವಿವಿಧ ಸಮಾಜ ಕಲ್ಯಾಣ ಯೋಜನೆಗಳು:** ೨೦೦೮–೦೯ರ ಸಾಲಿನಲ್ಲಿ, ಸ್ವರ್ಣ ಜಯಂತಿ ಗ್ರಾಮ ಸ್ವರಾಜ್ ಯೋಜನೆಯಡಿ ನಾಲ್ಕು ಗ್ರಾಮ ಹಾಗೂ ೩೬ ಗುಂಪುಗಳಿಗೆ ಪ್ರಯೋಜನ ಲಭಿಸಿತ್ತು. ಅದೇ ರೀತಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ೪೯೦೮೫ ಮಾನವ ದಿನಗಳು ಸೃಷ್ಟಿಸಲ್ಪಟ್ಟು ೫೪.೫೯ ಲಕ್ಷ ರೂ.ಗಳನ್ನು ವಿತರಿಸಲಾಗಿತ್ತು. ಆಶ್ರಯ ಯೋಜನೆಯಡಿ ತಾಲೂಕಿನಲ್ಲಿ ೨೦೦೯ರ ಮಾರ್ಚ್ ಅಂತ್ಯದವರೆಗೆ ೧೮೩೨ ಮನೆಗಳು ನಿರ್ಮಿಸಲ್ಪಟ್ಟಿದ್ದವು. ಅದೇ ರೀತಿ ಡಾ। ಅಂಬೇಡ್ಕರ್ ಯೋಜನೆಯಡಿ ೨೦೬ ಹಾಗೂ ಇಂದಿರಾ ಆವಾಸ್ ಯೋಜನೆಯಡಿ, ೩೨೭ ಮನೆಗಳನ್ನೂ ನಿರ್ಮಿಸಲಾಗಿತ್ತು. ೨೦೦೮–೦೯ರ ಸಾಲಿನಲ್ಲಿ ೧೫ ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು, ತಾಲೂಕಿನಲ್ಲಿ ಒಟ್ಟು ೧೩೬೪ ಕೊಳವೆ ಬಾವಿಗಳು ೨೦೦೯ರ ಮಾರ್ಚ್ ಅಂತ್ಯದವರೆಗೆ ಕೊರೆಯಲಾಗಿತ್ತು. ಕೊಳವೆ ನೀರು ಸರಬರಾಜು ಯೋಜನೆಯಡಿ ೧೯೦ ಕುಟುಂಬಗಳಿಗೆ ಹಾಗೂ ಸಣ್ಣ ನೀರು ಸರಬರಾಜು ಯೋಜನೆಯಡಿ ೧೯೦ ಕುಟುಂಬಗಳಿಗೆ ನೀರು ಸೌಕರ್ಯ ಒದಗಿಸಲಾಗಿತ್ತು. ಕೊಳವೆ ನಿರ್ಮೂಲನಾ ಯೋಜನೆಯಡಿ, ೪೯೨ ಜನರಿಗೆ ನೆರವನ್ನು ೨೦೦೮–೦೯ರ ಸಾಲಿನಲ್ಲಿ ಒದಗಿಸಲಾಗಿತ್ತು.